ಸಾಧ್ಯವಾಗದೇ ಹೋಗುವುದಕ್ಕೆ ನನ್ನ ಅಸಮಾಧಾನವನ್ನು ಎರಡೂ ಸದನಗಳಲ್ಲಿ ವ್ಯಕ್ತಪಡಿಸಿದ್ದೇನೆ. ಈ ವರ್ಷ ಈ ರೀತಿ ಆಗದಿರುವಂತೆ ಕ್ರಮ ತೆಗೆದುಕೊಂಡು ೩ ತಿಂಗಳಿಗೊಮ್ಮೆ ನನಗೆ ಕಾರ್ಯಕ್ರಮಗಳ ಅನುಷ್ಠಾನದ ಬಗ್ಗೆ ವರದಿಯನ್ನು ಕಳುಹಿಸಿಕೊಡಬೇಕೆಂದು ಆದೇಶವನ್ನು ಕೊಟ್ಟಿದ್ದೇನೆ ಮತ್ತು ಈ ವರ್ಷ ಕಟ್ಟುನಿಟ್ಟಾಗಿ ಈ ಹಣ ಫಲಾನುಭವಿಗಳಿಗೆ ಸಿಕ್ಕುವಂತೆ ವ್ಯವಸ್ಥೆ ಮಾಡುತ್ತೇನೆಂದು ತಮಗೆ ಭರವಸೆ ನೀಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತರ ವೇಳೆ ಮುಗಿಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೆಗಳು

Taking over of Rani Channamma Residential School at Kittur

291. SRI R. C. BALEKUNDARAGI AND SRI. MALLARIGOWDA S. PATIL —Will the Minister for Education be pleased to State:—

What action have the Government taken to take over Rani Channamma Residential School ?

SRI. B. RACHAIAH (Minister for Education).—There is no such proposal before Goverment.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಕುಷ್ಟಗಿ ತಾಲ್ಲೂಕಿನಲ್ಲಿ ಹೊಲಗೇರಾ ಗ್ರಾಮದಲ್ಲಿ ನಾಗರೀಕ ಸೌಲಭ್ಯಗಳು

೩೮೫ (೧೩೪) ಶ್ರೀ ಹನುಮೆಗೌಡ ಶಂಕರಗೌಡ (ಕುಷ್ಟಗಿ).—ಮಾನ್ಯ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ :—

ಅ) ರಾಯಚೂರು ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಹೊಲಗೇರಾ ಗ್ರಾಮದಲ್ಲಿ ಯಾವ ನಾಗರಿಕ ಸೌಲಭ್ಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಗ್ರಾಮಕ್ಕೆ ನಾಗರಿಕ ಸೌಲಭ್ಯಗಳನ್ನು ಒದಗಿಸಲು ಕೈಗೊಂಡ ಕ್ರಮಗಳೇನು ?

ಶ್ರೀ ಅಬ್ದುಲ್ ನಜೀರ್‌ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.—

ಅ) ಬಂದಿದೆ.

ಆ) ಪ್ರಸಕ್ತ ಸಾಲಿನಲ್ಲಿ ಸದ್ರಿ ಗ್ರಾಮಕ್ಕೆ ವಿದ್ಯುತ್ ಸೌಲಭ್ಯ, ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರಿನ ಸರಬರಾಜು ಯೋಜನೆ ಮೂಲಕ ನೀರಿನ ಸಮಸ್ಯೆಯನ್ನು ಪರಿಹರಿಸಲಾಗಿದೆ. ವಿದ್ಯುತ್ ಸರಬರಾಜನ್ನು ಎನ್.ಆರ್.ಡಬ್ಲ್ಯೂ.ಎಸ್. ಯೋಜನೆ ಮೂಲಕ ಒದಗಿಸಿದೆ ಮತ್ತು ವಿದ್ಯುತ್ಕ್ಕರಣದ ಕಾರ್ಯವು ಪ್ರಗತಿ ಪತದಲ್ಲಿದೆ.

ಕೋಲಾರ ಜಿಲ್ಲೆಯಲ್ಲಿ ಕೊಳವೆ ಬಾವಿಗಳನ್ನು ದುರಸ್ತಿ ಮಾಡುವುದು

೨೦೭. ಶ್ರೀ ಅಪ್ಪಾಸ್ವಾಮಿ ರೆಡ್ಡಿ (ಬಾಗೇಪಲ್ಲಿ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಕೋಲಾರ ಜಿಲ್ಲೆಯಲ್ಲಿರುವ ಕೊಳವೆ ಬಾವಿಗಳ ಸಂಖ್ಯೆ ಎಷ್ಟು ಮತ್ತು ಅವುಗಳಲ್ಲಿ ಎಷ್ಟಕ್ಕೆ ಕೈ ಪಂಪುಗಳನ್ನು ಹಾಕಲಾಗಿದೆ ?